**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 310/2015**

ಪಿ ಡಬ್ಲ್ಯೂ-1

**ದಿನಾಂಕ 22-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**
**ಮುಂದುವರೆದ ಪಾಟೀ ಸವಾಲು ಶ್ರೀ ಆರ್ ಕೆ ಎಸ್ ಪ್ರತಿವಾದಿ ಪರ ವಕೀಲರುಃ**

ದಾವಾ ಷೆಡ್ಯೂಲ್ ಸ್ವತ್ತಿನ ಪಶ್ಚಿಮ ಮತ್ತು ಉತ್ತರಕ್ಕೆ ಎರಡು ಕಡೆ ನಮಗೆ ಸೇರಿದ ಜಮೀನು ಇದೆ. ದಾವಾ ಷೆಡ್ಯೂಲ್ ಸ್ವತ್ತು ಅದೇ ರೀತಿ ಅದರ ಪಶ್ಚಿಮ ಮತ್ತು ಉತ್ತರ ದಿಕ್ಕಿನಲ್ಲಿರುವ ಎರಡು ಜಮೀನುಗಳು ಒಂದೇ ಸರ್ವೇ ನಂಬರ ನಲ್ಲಿ ಇದ್ದು ಪ್ರತ್ಯೇಕವಾದ ಪೋಡುಗಳಾಗಿರುತ್ತವೆ. ಉಳಿಕೆ ಜಮೀನಿನ ಸರ್ವೇ ನಂಬರನ್ನು ತೆರೆದು ನೋಡಿದಾಗ ದಾವಾ ಜಮೀನು ಸಹ ಬರುತ್ತದೆ ಎಂದರೆ ಸರಿಯಲ್ಲ.

2. ನಾನು ಜಮೀನನ್ನು ಖರೀದಿ ಮಾಡುವ ಸಂದರ್ಭದಲ್ಲಿ ಕಾಳೇಗೌಡ, ರಾಮೇಗೌಡ ಮತ್ತು ಮಂಜೇಗೌಡ ಸಹ ಇದ್ದರು. ಕಾಳೇಗೌಡ ಮತ್ತು ರಾಮೇಗೌಡ ರನ್ನು ನ್ಯಾಯಾಲಯಕ್ಕೆ ಕರೆಯಿಸಿ ಸಾಕ್ಷಿ ನುಡಿಸಲು ತೊಂದರೆ ಇರುವುದಿಲ್ಲ. ಸದರಿ ದಿನ ಕಾಳೇಗೌಡ, ರಾಮೇಗೌಡ ಮಂಜೇಗೌಡ ಮತ್ತು ಸವಿತಾ ಸಹ ಇದ್ದರೂ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲರೂ ಇದ್ದರು ಆದರೆ ಸವಿತಾ ಇರಲಿಲ್ಲ ಎಂದು ತಿಳಿಸಿರುತ್ತಾರೆ.

3. ನಾನು ಸವಿತಾ ರವರ ಕಡೆಯಿಂದ 10 ಸಾವಿರ ಹಣವನ್ನು ಪಡೆದುಕೊಂಡಿದ್ದರು ಸಹ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ದಿನ ಪತ್ರ ಬರಹಗಾರರ ಬಳಿ ಸವಿತಾ ರವರಿಗೆ 2 ಗುಂಟೇ ಜಮಿನನ್ನು ನೀಡುವುದಾಗಿ ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಸವಿತಾ ರವರ ಗಂಡ ಮಧ್ಯಪಾನಿಯಾಗಿದ್ದು ಸ್ವಲ್ಪ ದಿನದ ನಂತರ ಪತ್ರ ವನ್ನು ಬರೆದುಕೊಡುವುದಾಗಿ ಹೇಳಿ ಪತ್ರವನ್ನು ನಾನೇ ಇಟ್ಟುಕೊಂಡಿದ್ದೇನೆ ಎಂದರೆ ಸರಿಯಲ್ಲ.

4. ಸವಿತಾರವರಿಗೆ 2 ಗುಂಟೆಗೆ ಸಂಬಂಧಿಸಿದಂತೆ ಖಾತೆಯನ್ನು ಮಾಡಲು ನಾನು ಅರ್ಜಿಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸವಿತಾರವರು ಸುಳ್ಳು ಖಾತೆಯನ್ನು ಮಾಡಿಸಿಕೊಂಡಿದ್ದಾರೆ ಎಂದು ತಿಳಿಸಿರುತ್ತಾರೆ. ಸದರಿ ಖಾತೆಯನ್ನು ಪ್ರಶ್ನಿಸಿ ನಾನು ಉಪವಿಭಾಗಹಾಧಿಕಾರಿಯವರ ಕಚೇರಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು ಸದರಿ ಮೇಲ್ಮನವಿಯಲ್ಲಿ ಸವಿತಾ ಮತ್ತು ಮಂಜೇಗೌಡರಿಗೆ ನೋಟೀಸ್ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಎ.ಸಿ. ನ್ಯಾಯಾಲಯದಲ್ಲಿ ಏಕಪಕ್ಷೀಯವಾಗಿ ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ.

5. ನಾನು ನಮ್ಮ ರಾಜಕೀಯ ಪ್ರಭಾವವನ್ನು ಬೀರಿ ಸವಿತಾ ಮತ್ತು ಮಂಜೇಗೌಡರಿಗೆ ನೋಟೀಸ್ ಜಾರಿಯಾಗದ ಹಾಗೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸವಿತಾರವರು 2 ಗುಂಟೆ ಜಮೀನಿನಲ್ಲಿ ಖಾತೆಯನ್ನು ಬದಲಾಯಿಸಿಕೊಂಡು ಅಲ್ಲಿಯೇ ಮನೆಯನ್ನು ನಿರ್ಮಿಸಿಕೊಂಡು ಅಲ್ಲಿಯೇ ವಾಸವಾಗಿದ್ದಾರೆ ಎಂದರೆ ಸರಿಯಲ್ಲ.

6. ಅದೇ ರೀತಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಿಂದ ಸದರಿ ಮನೆಗೆ ಎಲ್ಲಾ ರೀತಿಯ ನೀರು, ವಿದ್ಯುತ್ ಸೌಲಭ್ಯವನ್ನು ಪಡೆದುಕೊಂಡು ಸದರಿ ಜಾಗಕ್ಕೆ ಕಂದಾಯವನ್ನು ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು 2006 ನೇ ಇಸವಿಯಲ್ಲಿಯೇ ಜಮೀನನ್ನು ಖರೀದಿ ಮಾಡಿದ ನಂತರ 2 ಗುಂಟೆ ಜಮೀನನ್ನು ಸವಿತಾ ರವರಿಗೆ ಖಾತೆ ಮಾಡಿ ಕೊಟ್ಟಿರುತ್ತೇವೆ ಎಂದರೆ ಸರಿಯಲಲ. ಸಾಕ್ಷಿ ಮುಂದುವರೆದು 2006 ರಿಂದ 2009 ವರೆಗೆ ಜಮೀನು ನನ್ನ ಮತ್ತು ಮಂಜೇಗೌಡರ ಹೆಸರಿನಲ್ಲಿ ಖಾತೆ ಜಂಟಿಯಾಗಿದ್ದು ನಂತರ ನನ್ನ ಹೆಸರಿನ್ನು ಕೈ ಬಿಡಲಾಗಿದೆ.

7. ನಿಪಿ 2 ರಂತೆ ಸವಿತಾರವರು ತಮ್ಮ ಹೆಸರಿಗೆ 2 ಗುಂಟೆ ಖಾತೆ ವರ್ಗಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸವಿತಾರವರು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ತಿಳಿಸಿರುತ್ತಾರೆ. ಸವಿತಾ ಹಾಗೂ ಮಂಜೇಗೌಡರಿಗೆ ತೊಂದರೆಯನ್ನುಂಟು ಮಾಡುವ ಸಲುವಾಗಿ ಮತ್ತು ಅವರ ಸ್ವಾಧೀನಕ್ಕೆ ಅಡ್ಡಿ ಪಡಿಸುವ ಸಲುವಾಗಿ ನಾನು ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸವಿತಾರವರಿಗೆ ಸೇರಿದ 2 ಗುಂಟೆ ಜಮೀನನ್ನು ಅಕ್ರಮವಾಗಿ ಹೊಡೆಯುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆಸರಿಯಲ್ಲ

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಚಂದನ್.ಎಸ್)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ